# ಅಂಜು ಭಾರತದ ಕ್ರೀಡಾತಾರೆ



■ ಪ್ರವೀಣ ಕುಲಕರ್ಣಿ

ಭಾರತೀಯ ಅಥ್ಲೆಟಿಕ್ಸ್ ದಿಗಂತವನ್ನು ಬೆಳಗಿದ ಮಹಿಳಾ ತಾರೆಗಳಲ್ಲಿ ಅತ್ಯಂತ ಪ್ರಮುಖ ಹೆಸರೆಂದರೆ ಅದು ಅಂಜು ಬಾಬಿ ಜಾರ್ಜ್ ಅವರದು. ಒಬ್ಬ ಮಹಿಳಾ ಅಥ್ಲೀಟ್ ಆಗಿ ಅವರು ಮಾಡಿದ ಸಾಧನೆ ಎಷ್ಟು ಮುಖ್ಯವೋ ಕೋಚ್ ಆಗಿ, ಕ್ರೀಡಾ ಆಡಳಿತಗಾರ್ತಿಯಾಗಿ ಅವರು ಮಾಡಿದ ಸಾಧನೆ ಕೂಡ ಅಷ್ಟೇ ಮುಖ್ಯವಾದುದು. ಹೊಸ ಕ್ರೀಡಾ ಪ್ರತಿಭೆಗಳನ್ನು ಶೋಧಿಸಲು, ಕ್ರೀಡೆಯಲ್ಲೂ ಲಿಂಗ ಸಮಾನತೆಯನ್ನು ತರಲು ಅಂಜು ಅವರು ಹಾಕಿದ ಶ್ರಮ, ಉಳಿದ ಅಥ್ಲೀಟ್‌ಗಳಿಗಿಂತಲೂ ಅವರನ್ನು ಭಿನ್ನವಾಗಿ ನೋಡುವಂತೆ ಮಾಡುತ್ತದೆ. ಹಾಗಾಗಿಯೇ ವಿಶ್ವ ಅಥ್ಲೆಟಿಕ್ಸ್ ಸಂಸ್ಥೆಯಿಂದ ಈ ಸಲ ಅವರಿಗೆ 'ವರ್ಷದ ಮಹಿಳೆ' ಪ್ರಶಸ್ತಿ ಒಲಿದು ಬಂದಿದೆ. ಇದೇ ವರ್ಷ ಮಾರ್ಚ್‌ನಲ್ಲಿ ಬಿಬಿಸಿಯಿಂದ ಜೀವಮಾನ ಸಾಧನೆ ಪುರಸ್ಕಾರವನ್ನೂ ಅವರು ಪಡೆದಿದ್ದಾರೆ.

ವಿಶ್ವ ಅಥ್ಲೆಟಿಕ್ಸ್ ಸಂಸ್ಥೆಯಿಂದ ಇಂತಹ ಗೌರವಕ್ಕೆ ಪಾತ್ರರಾಗುತ್ತಿರುವ ಭಾರತದ ಮೊದಲ ಹಾಗೂ ಜಗತ್ತಿನ ಎರಡನೇ ಅಥ್ಲೀಟ್ ಆಗಿದ್ದಾರೆ ಅಂಜು. ಈ ಹಿಂದೆ, 2019ರಲ್ಲಿ ಇಥಿಯೋಪಿಯಾದ ಒಲಿಂಪಿಕ್ ಚಾಂಪಿಯನ್ ಡೆರಾರ್ತು ತುಲು ಅವರು ಮೊದಲ ಬಾರಿಗೆ 'ವರ್ಷದ ಮಹಿಳೆ' ಗೌರವಕ್ಕೆ ಪಾತ್ರರಾಗಿದ್ದರು. ಅದೇ ವರ್ಷ ಪಿ.ಟಿ. ಉಷಾ ಅವರಿಗೆ 'ಹಿರಿಯ ಕ್ರೀಡಾಪೋಷಕಿ' ಪ್ರಶಸ್ತಿ ದೊರೆತಿತ್ತು.

ಕೇರಳ ಮೂಲದ ಅಂಜು, ಲಾಂಗ್‌ಜಂಪ್ ಅಥ್ಲೀಟ್. ಕೊಟ್ಟಾಯಂ ಜಿಲ್ಲೆಯ ಚಂಗನಶ್ಶೇರಿ ಎಂಬ ಪುಟ್ಟ ಗ್ರಾಮದಲ್ಲಿ ಜನಿಸಿದ ಅವರು ವಿಶ್ವ ಕ್ರೀಡಾರಂಗದಲ್ಲಿ ಮಿಂಚುವ ಮಟ್ಟಕ್ಕೆ ಸವೆಸಿದ ಹಾದಿ, ಯಾರಿಗೇ ಆಗಲಿ ಪ್ರೇರಣೆ ಆಗಬಲ್ಲುದು. ಶಾಲಾ ದಿನಗಳಲ್ಲಿಯೇ ಕ್ರೀಡೆಯಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದ ಅವರು, ಬಾಲಕಿಯರ ವಿಭಾಗದ ಚಾಂಪಿಯನ್ ಆಗಿ ಹೊರಹೊಮ್ಮುವ ಮೂಲಕ ಭರವಸೆ ಮೂಡಿಸಿದವರು. 44 ವರ್ಷದ ಈ ಸಾಧಕಿ, ಭಾರತೀಯ ಮಹಿಳಾ ಕ್ರೀಡೆಯ ತಾರೆಯಾಗಿ ಬೆಳಗಿದ್ದಲ್ಲದೆ ಹೊಸ ತಲೆಮಾರಿನ ಕ್ರೀಡಾಪಟುಗಳಿಗೆಲ್ಲ ಮಾದರಿ ಎನಿಸಿದವರು. ಅಂದಹಾಗೆ, ಅಂಜು ತರಬೇತಿ ಪಡೆದಿದ್ದು ಬೆಂಗಳೂರಿನಲ್ಲಿ ಎನ್ನುವುದು ನಮ್ಮೆಲ್ಲರಿಗೆ ಹೆಮ್ಮೆ ತರುವ ವಿಚಾರ. ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಮಹಿಳಾ ಲಾಂಗ್‌ಜಂಪ್ ಸ್ಪರ್ಧೆಯಲ್ಲಿ (2003) ಕಂಚಿನ ಪದಕ ನೆಗೆತ ನೆಗೆದಿದ್ದ ಅವರು, ಎರಡು ವರ್ಷಗಳ ಬಳಿಕ ಐಎಎಎಫ್ ಕೂಟದಲ್ಲಿ ಚಿನ್ನದ ಪದಕ ಜಯಿಸಿದ್ದರು. ಒಲಿಂಪಿಕ್ ಕೂಟದ ಇದೇ ವಿಭಾಗದ ಸ್ಪರ್ಧೆಯಲ್ಲಿ ಆರನೇ ಸ್ಥಾನವನ್ನು ಪಡೆದಿದ್ದರು.

'ಅಂತರರಾಷ್ಟ್ರೀಯ ಲಾಂಗ್‌ಜಂಪ್ ಕ್ರೀಡೆಯ ಈ ಮಾಜಿ ಅಥ್ಲೀಟ್ ಈಗಲೂ ಕ್ರೀಡೆಯ ಏಳ್ಗೆಗಾಗಿ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿದ್ದಾರೆ. ಯುವ ಅಥ್ಲೀಟ್‌ಗಳಿಗೆ ತರಬೇತಿ ನೀಡಲು ಅವರು 2016ರಲ್ಲಿಯೇ ಅಕಾಡೆಮಿಯೊಂದನ್ನು ಆರಂಭಿಸಿದ್ದಾರೆ. ಅದರಿಂದ 20 ವರ್ಷದೊಳಗಿನ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಪದಕ ವಿಜೇತೆಯೊಬ್ಬಳು ಹೊರಹೊಮ್ಮಿದ್ದಾಳೆ' ಎಂದು ವಿಶ್ವ ಅಥ್ಲೆಟಿಕ್ಸ್ ಒಕ್ಕೂಟ ಹೆಮ್ಮೆಯಿಂದ ಹೇಳಿದೆ.

ಕ್ರೀಡೆಯಲ್ಲಿ ಲಿಂಗ ಸಮಾನತೆಗಾಗಿ ಹಂಬಲಿಸುತ್ತಾ, ಆ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವ ಅಂಜು, ಭಾರತೀಯ ಅಥ್ಲೆಟಿಕ್ಸ್ ಒಕ್ಕೂಟದ ಹಿರಿಯ ಉಪಾಧ್ಯಕ್ಷೆಯೂ ಹೌದು. ಕ್ರೀಡಾ ಆಡಳಿತದಲ್ಲಿ ಯಾವುದೇ ಮಹಿಳಾ ಅಥ್ಲೀಟ್ ಇದುವರೆಗೆ ಇಷ್ಟೊಂದು ಉನ್ನತ ಹುದ್ದೆಯನ್ನು ಅಲಂಕರಿಸಿರಲಿಲ್ಲ. ಅವರು ಭಾರತೀಯ ಒಲಿಂಪಿಕ್ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯೆಯೂ ಆಗಿದ್ದಾರೆ. ಆ ಮೂಲಕ ಅಥ್ಲೆಟಿಕ್ಸ್‌ನ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆಯನ್ನು ನೀಡುತ್ತಿದ್ದಾರೆ.

ಅಂಜು ಅವರ ಪತಿ ಬಾಬಿ ಜಾರ್ಜ್ ದೇಶದ ಪ್ರಮುಖ ಕೋಚ್‌ಗಳಲ್ಲಿ ಒಬ್ಬರು. ಅವರು ತಮ್ಮ ತರಬೇತಿ ಕೌಶಲವನ್ನು ಅಕಾಡೆಮಿಯ ಯುವ ಅಥ್ಲೀಟ್‌ಗಳನ್ನು ರೂಪಿಸುವುದಕ್ಕಾಗಿ ವಿನಿಯೋಗಿಸುತ್ತಿದ್ದಾರೆ. 1952ರಲ್ಲಿ ಹೆಲ್ಸಿಂಕಿಯಲ್ಲಿ ನಡೆದ ಒಲಿಂಪಿಕ್ ಕೂಟದ ಓಟದ ಸ್ಪರ್ಧೆಯಲ್ಲಿ ನೀಲಿಮಾ ಘೋಷ್ ಅವರು ಪಾಲ್ಗೊಳ್ಳುವ ಮೂಲಕ ಕ್ರೀಡಾರಂಗದಲ್ಲಿ ಮಹಿಳೆಯರು ದಾಪುಗಾಲು ಹಾಕಲು ಆರಂಭಿಸಿ ಏಳು ದಶಕಗಳೇ ಕಳೆದಿವೆ. ಆದರೆ, ಈ ಅವಧಿಯಲ್ಲಿ ಸವೆಸಿದ ಹಾದಿ ಅತ್ಯಲ್ಪ. ಅದರಲ್ಲೂ ಪಿ.ಟಿ. ಉಷಾ, ಅಂಜು ಅವರಂತಹ ಬೆರಳೆಣಿಕೆಯಷ್ಟು ಅಥ್ಲೀಟ್‌ಗಳನ್ನು ಹೊರತುಪಡಿಸಿದರೆ ಫೀಲ್ಡ್ ಮತ್ತು ಟ್ರ್ಯಾಕ್‌ನಲ್ಲಿ ಸಾಧನೆ ತೋರಿದ ಭಾರತೀಯ ಮಹಿಳಾ ಅಥ್ಲೀಟ್‌ಗಳು ಇಲ್ಲವೇ ಇಲ್ಲ ಎನ್ನುವಷ್ಟು ವಿರಳ. ಅಂಜು ಅವರ ಅಕಾಡೆಮಿ ಅಂತಹ ಕೊರತೆಯನ್ನು ತುಂಬಿಸುವ ಅದಮ್ಯ ಉತ್ಸಾಹವನ್ನು ತೋರುತ್ತಿದೆ.

'ನಸುಕಿನಲ್ಲಿ ಎದ್ದು ಕ್ರೀಡಾಂಗಣಕ್ಕೆ ಇಳಿಯುವುದು ಉಳಿದೆಲ್ಲ ಚಟುವಟಿಕೆಗಳಿಗಿಂತ ಹಿತಾನುಭವ ನೀಡುವ ಕೆಲಸ. ಮಹಿಳಾ ಕ್ರೀಡಾಪಟುಗಳ ಸಬಲೀಕರಣಕ್ಕೆ ಸಾಧ್ಯವಾದ ಕಾಣಿಕೆ ಸಲ್ಲಿಸುತ್ತಿರುವುದು ನನ್ನಲ್ಲಿ ಹೆಮ್ಮೆ ಮೂಡಿಸಿದೆ. ಈ ಕೆಲಸವನ್ನು ಗುರುತಿಸಿದ್ದಕ್ಕೆ ಸಹಜವಾಗಿಯೇ ಸಂತೋಷವಾಗಿದೆ' ಎನ್ನುತ್ತಾರೆ ಅಂಜು. ಅಂಜು ಅವರ ಅಕಾಡೆಮಿ ಒಟ್ಟಾರೆ 13 ಮಹಿಳಾ ಅಥ್ಲೀಟ್‌ಗಳಿಗೆ ತರಬೇತಿ ನೀಡುವ ಕೆಲಸ ಮಾಡುತ್ತಿದೆ. ಈ ಅಥ್ಲೀಟ್‌ಗಳು ಜಾಗತಿಕ ಸ್ಪರ್ಧೆಯಲ್ಲಿ ಈಗಾಗಲೇ ಗಮನ ಸೆಳೆಯುವಂತಹ ಪ್ರದರ್ಶನ ನೀಡುತ್ತಿದ್ದಾರೆ. ತಮ್ಮ ತಾರೆಗಳ ತೋಟದ ಹಲವು ತಾರೆಗಳು ಜಾಗತಿಕ ಕ್ರೀಡಾರಂಗದಲ್ಲಿ ಮಿಂಚಬಹುದು ಎಂದು ಅಂಜು ಅವರು ಭರವಸೆ ವ್ಯಕ್ತಪಡಿಸುವಾಗ ಅವರ ಕಣ್ಣುಗಳು ಹೊಳೆಯುತ್ತವೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65